## ಜವರಾಯನ ಸ್ಥಾನದಲ್ಲಿ ಈಗ ಯಾರ ಮುಖ: ವೈರಾಣುವಿನದೆ? ವ್ಯವಸ್ಥೆಯದೆ?

# ಜವರಾಯನಿಗೀಗ ಪ್ರಶ್ನೆಗಳು ಅಪಥ್ಯ



**ಜವರಾಯ ಬಂದರೆ ಬರಿಗೈಲಿ ಬರಲಿಲ್ಲ ಎನ್ನುವ ಜನಪದ ಗೀತೆಯಲ್ಲಿನ ಹೆಣ್ಣಿನ ಸಂಕಟ, ವರ್ತಮಾನದ ನಮ್ಮ ಎದೆಗುದಿಯೂ ಹೌದೆನ್ನಿಸುವುದನ್ನು ನೋಡಿದರೆ, ದೀನದುರ್ಬಲರ ಜೀವಕ್ಕೆ ಯಾವ ಕಾಲದಲ್ಲೂ ಕಿಮ್ಮತ್ತಿರಲಿಲ್ಲ ಎನ್ನಿಸುತ್ತದೆ.**

■ **ವಿ.ಆರ್.**

ಕೊರೊನಾ ಸಂದರ್ಭ ಸಮಾಜವನ್ನು ಸ್ಪಷ್ಟವಾಗಿ ಎರಡು ಗುಂಪುಗಳಾಗಿ ಒಡೆದಿದೆ. ರೋಗ ಮತ್ತು ಸಾವಿನ ಭಯದಿಂದ ಕಂಗಾಲಾಗಿರುವ ಗುಂಪು ಒಂದೆಡೆ. ಆ ಭಯವನ್ನೇ ವ್ಯಾಪಾರವನ್ನಾಗಿಸಿಕೊಂಡಿರುವ ಗುಂಪು ಮತ್ತೊಂದೆಡೆ. ವ್ಯಾಪಾರ ಎಲ್ಲ ಕಾಲದಲ್ಲೂ ಇರುವಂತಹದ್ದೇ. ಆದರೆ, ಕೊರೊನಾ ಸಂದರ್ಭದಲ್ಲಿ ಜನಸಾಮಾನ್ಯರ ಹಿತ ಕಾಯಬೇಕಾದ ವ್ಯಕ್ತಿಗಳು ಕೂಡ ಅಂಗಡಿ ತೆರೆದುಕೊಂಡಿದ್ದಾರೆ. ಸಂಕಷ್ಟದ ಪರಿಹಾರಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳ ಪ್ಯಾಕೇಜ್‌ಗಳು ಪ್ರಕಟಗೊಂಡಿವೆ. ಅಷ್ಟೆಲ್ಲ ದುಡ್ಡು ಎಲ್ಲಿಗೆ ಹೋಗುತ್ತಿದೆ ಎನ್ನುವುದು ಜನಸಾಮಾನ್ಯನಿಗೆ ಮಾತ್ರ ಅರ್ಥವಾಗುತ್ತಿಲ್ಲ. ಕಣ್ಣಮುಂದೆಯೇ ಸಂಭವಿಸುತ್ತಿರುವ ಸಾವುಗಳಲ್ಲಿ ರೋಗದ ಪಾಲೆಷ್ಟು, ವ್ಯವಸ್ಥೆಯ ಪಾಲೆಷ್ಟು ಎನ್ನುವುದು ತಿಳಿಯುತ್ತಿಲ್ಲ. ಸಾವುಗಳಿಗೆ ಕಂಗೆಡಬೇಡಿ, ಪುನರ್ಜನ್ಮದಲ್ಲಿ ನಂಬಿಕೆಯಿರುವ ಸಂಸ್ಕೃತಿ ನಮ್ಮದು ಎಂದು ಮಹಾನುಭಾವರೊಬ್ಬರು ಸಮಾಧಾನ ಹೇಳಿದ್ದಾರೆ. ನಿಜ, ಪುನರ್ಜನ್ಮದಲ್ಲಿ ನಂಬಿಕೆ ಮಾತ್ರವಲ್ಲ, ಮರಣವನ್ನು ಮಹಾನವಮಿ ಎಂದು ನಂಬಿದ ಸಂಸ್ಕೃತಿ ನಮ್ಮದು. ಆದರೆ, ಹೀಗೆ ಸಮಾಧಾನ ತಳೆಯಲಿಕ್ಕೆ ಸಾವುಗಳು ಸಂಭವಿಸುತ್ತಿರುವುದು ಎಲ್ಲೋ ದೂರದಲ್ಲಲ್ಲ; ನೆರೆಹೊರೆಯಲ್ಲಿ, ನಮ್ಮದೇ ಮನೆಯಲ್ಲಿ ಅಳು ಕೇಳಿಸುತ್ತಿದೆ. ಹೇಗೆ ಸಮಾಧಾನಿಸಿಕೊಳ್ಳುವುದು? ಸೂತಕದ ಛಾಯೆ ಎಲ್ಲೆಡೆ ಆವರಿಸಿಕೊಂಡಿರುವಾಗ 'ಧನಾತ್ಮಕ ಯೋಚನೆ'ಗಳ ಬಗ್ಗೆ ಯಾರಾದರೂ ಮಾತನಾಡಿದರೆ ಅಳುವುದೋ ನಗುವುದೋ? ಬಹುಶಃ, ಈ ಮಟ್ಟಿಗಿನ ಅಸಹಾಯಕತೆಯನ್ನು ನಾವು ಹಿಂದೆಂದೂ ಅನುಭವಿಸಿರಲಿಕ್ಕಿಲ್ಲ. ಇಂತಹುದೇ ಅಸಹಾಯಕತೆಯನ್ನು, ಸಾವು ಎದುರಿಗೆ ನಿಂತಾಗಿನ ಜೀವಭಯವನ್ನು ಜನಪದ ಹೆಣ್ಣೊಬ್ಬಳು ಅನುಭವಿಸಿರಬೇಕು. ಆಕೆಯ ಆರ್ತನಾದದ ಹಾಡು, ವರ್ತಮಾನದ ನಮ್ಮ ಎದೆಗುದಿಯೂ ಹೌದೆನ್ನಿಸುವುದನ್ನು ನೋಡಿದರೆ, ದೀನದುರ್ಬಲರ ಜೀವಕ್ಕೆ ಯಾವ ಕಾಲದಲ್ಲೂ ಕಿಮ್ಮತ್ತಿರಲಿಲ್ಲ ಎನ್ನಿಸುತ್ತದೆ.

ಹಾಡು ಶುರುವಾಗುವುದು ಜವರಾಯನ, ಅಂದರೆ ಸಾವಿನ ದೇವ ಯಮಧರ್ಮದ ಆಗಮನದೊಂದಿಗೆ. ಅವನ ಆಗಮನ ಹೇಗಿತ್ತು? 'ಜವರಾಯ ಬಂದರೆ ಬರಿಗೈಲಿ ಬರಲಿಲ್ಲ / ಕುಡುಗೋಲು ಕೊಡಲಿ ಒಂದ್ಹೆಗಲೇರಿ...' ಬಂದಿದ್ದಾನೆ. ಆಯುಧ ಹಿಡಿದುಬಂದವನು ಸುಮ್ಮನಿದ್ದಾನೆಯೇ? ಒಳ್ಳೊಳ್ಳೆ ಮರಗಳನ್ನು, ಫಲಬಿಟ್ಟ ಮರಗಳೇ ಅವನ ಗುರಿ.

ಜೀವ ಕೊಂಡುಹೋಗಲು ಬಂದವನಾದರೂ, ಮನೆಗೆ ಬಂದವನನ್ನು ಉಪಚರಿಸದಿದ್ದರೆ ಭಾರತೀಯ ಸಂಸ್ಕೃತಿಗೆಲ್ಲಿ ಬೆಲೆ? 'ಎಂದೂ ಬಾರದ ಜವರಾಯ ಇಂದೇಕೆ ಬಂದೀರಿ / ಕೊಳ್ಳಯ್ಯ ನೀರ ಕುಡಿನೀರ' ಎಂದು ಗೃಹಿಣಿ ಉಪಚಾರದ ಮಾತನಾಡುತ್ತಾಳೆ. ಆದರೆ, ಪಾಶ ಹಿಡಿದವನಿಗೆ ಉಪಚಾರದ ಮಾತು ರುಚಿಸುವುದಿಲ್ಲ. ಕುಡಿಯಲಿಕ್ಕೆ ಕೂರಲಿಕ್ಕೆ ಇಲ್ಲಿಗೆ ಬಂದಿಲ್ಲ; ಗಂಡನ ಮಡದಿ ನನ್ನೊಂದಿಗೆ ನಡೆ ಎನ್ನುತ್ತಾನೆ.

ಗೃಹಿಣಿ ಸುಲಭಕ್ಕೆ ಸೋಲುವುದಿಲ್ಲ. ತನ್ನ ಕೌಟುಂಬಿಕ ಜವಾಬ್ದಾರಿಗಳನ್ನು ಮನದಟ್ಟು ಮಾಡಿಕೊಡುವ ಮೂಲಕ ಜವರಾಯನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಮನೆಯ ಮುಂದೆ ಎದ್ದಿರುವ ಚಪ್ಪರ ಹಾಗೂ ಹಬ್ಬದ ಸಡಗರವನ್ನು ತೋರಿ, ಇದನ್ನೆಲ್ಲ ಬಿಟ್ಟು ಹೇಗೆ ಬರಲಿ ಎನ್ನುತ್ತಾಳೆ. ಹಾಲುಂಡು ತೋಳ ಮೇಲಾಡುವ ಮಗನನ್ನು ಮುಂದೆ ಮಾಡುತ್ತಾಳೆ. ಕಾಳು ಕಡ್ಡಿ ಮಾರಿ ಮಾಡಿಸಿದ್ದ ಕಟ್ಟಾಣಿಯನ್ನು ಅರೆಗಳಿಗೆಯೂ ಧರಿಸಲಿಲ್ಲ ಎಂದು ಕೊರಗುತ್ತಾಳೆ. ಜವರಾಯ ಯಾವುದಕ್ಕೂ ಕರಗುವುದಿಲ್ಲ. ಹಬ್ಬ ಮಾಡುವುದಕ್ಕೆ ಹಾಗೂ ಕಟ್ಟಾಣಿ ತೊಡಲಿಕ್ಕೆ ಬೇರೊಬ್ಬಳು ಚೆಲುವೆ ಬರುತ್ತಾಳೆ ಎನ್ನುವ ಮೂಲಕ ಹೆಣ್ಣುಮಗಳ ಅಸ್ತಿತ್ವವನ್ನೇ ತಳ್ಳಿಹಾಕುತ್ತಾನೆ. ಬಾಲನಿಗೆ ತಕ್ಕಂಥ ಬಾಲೇರು ಬರುತ್ತಾರೆ ಎನ್ನುತ್ತಾನೆ.

ತನ್ನ ಅಗತ್ಯಗಳಿಗೆಲ್ಲ ಜವರಾಯ ಪರ್ಯಾಯ ಸೂಚಿಸಿದಾಗ, ಗೃಹಿಣಿ ಕೊನೆಯ ಪ್ರಯತ್ನ ಎನ್ನುವಂತೆ, ತನ್ನನ್ನು ಕರೆದೊಯ್ಯುವುದು ನ್ಯಾಯಬದ್ಧವಲ್ಲ ಎನ್ನುವುದನ್ನು ಜವರಾಯನ ಗಮನಕ್ಕೆ ತರುತ್ತಾಳೆ. 'ಆಚೆ ಕೇರಿಲಿರೋ ರಂಡೇರು ಮಿಂಡೇರು / ಅವರನಾರ ಕರಕೊಂಡು ಹೋಗಬಾರದೆ' ಎಂದು ನೈತಿಕ ಪ್ರಶ್ನೆಯನ್ನೆತ್ತುತ್ತಾಳೆ. ಹೌದಲ್ಲವೆ? ಸಮಾಜಕ್ಕೆ ಸಮಸ್ಯೆಯ ರೂಪದಲ್ಲಿರುವವರನ್ನು ಬಿಟ್ಟು ಗರತಿಯನ್ನು ಕೊಂಡೊಯ್ಯುವುದೆ? ಈ